ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301
e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ: ಎಸಿ7/27/2024-25 ದಿನಾಂಕ: 21-10-2024

## ಅಂತಿಮ ಅಧಿಸೂಚನೆ-2

ವಿಷಯ: 2024-25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪ್ರೋಗ್ರಾಂಗಳಿಗೆ/ಪಿ.ಜಿ.ಡಿಪ್ಲೋಮಾ/ಡಿಪ್ಲೋಮಾ/ಸರ್ಟಿಫಿಕೇಟ್ ಪ್ರೋಗ್ರಾಂಗಳಿಗೆ (ವಿದೇಶಿ ವಿದ್ಯಾರ್ಥಿಗಳನ್ನು ಒಳಗೊಂಡಂತೆ) ಭರ್ತಿಯಾಗದೆ ಖಾಲಿ ಉಳಿದ ಸೀಟುಗಳಿಗೆ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ:
1. ಈ ಕಛೇರಿಯ ಸಮ ಸಂಖ್ಯೆ ಅಧಿಸೂಚನೆ ದಿನಾಂಕ: 31-08-2024.
2. ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳ/ಸಂಯೋಜಿತ ಕಾಲೇಜುಗಳ ಅಧ್ಯಕ್ಷರು/ ಪ್ರಾಂಶುಪಾಲರುಗಳ ಮನವಿ.
3. ಅಧಿಸೂಚನೆ ಸಂಖ್ಯೆ ಎಸಿ7/27/2024-25 ದಿನಾಂಕ 12.09.2024.
4. ಅಂತಿಮ ಅಧಿಸೂಚನೆ ಸಂಖ್ಯೆ ಎಸಿ7/27/2024-25 ದಿನಾಂಕ 10.10.2024.
5. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 21.10.2024

*******

ಉಲ್ಲೇಖಿತ(2)ರ ಮನವಿ ಮೇರೆಗೆ, ಉಲ್ಲೇಖಿತ(3) ಮತ್ತು (4)ರ ಅಧಿಸೂಚನೆಯಲ್ಲಿನ ವೇಳಾಪಟ್ಟಿಯಂತೆ ಸ್ನಾತಕೋತ್ತರ ಪ್ರೋಗ್ರಾಂ/ ಪಿ.ಜಿ.ಡಿಪ್ಲೋಮಾ /ಡಿಪ್ಲೋಮಾ/ ಸರ್ಟಿಫಿಕೇಟ್ ಪ್ರೋಗ್ರಾಂಗಳ ಪ್ರವೇಶಾತಿ ಪ್ರಕ್ರಿಯೆ ನಡೆದ ನಂತರ ಸೀಟುಗಳು ಭರ್ತಿಯಾಗದೆ ಉಳಿದಿದ್ದಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ತಿಳಿಸಿದೆ.

1. Admission portalನಲ್ಲಿ Register ಆಗಿ ಪ್ರವೇಶ ಪರೀಕ್ಷೆ ಬರೆದು Admission Application ಹಾಕದೆ ಇರುವಂತಹ ವಿದ್ಯಾರ್ಥಿಗಳು ಅರ್ಜಿ ಶುಲ್ಕ ರೂ.500/-ಗಳನ್ನು Online/Offline ಮೂಲಕ ವಿಶ್ವವಿದ್ಯಾನಿಲಯದ GRA ಖಾತೆಗೆ ಪಾವತಿಸಿ ಚಲನ್‌ನೊಂದಿಗೆ ಭರ್ತಿ ಮಾಡಿದ ಅರ್ಜಿ ಮತ್ತು ಅಗತ್ಯ ದಾಖಲೆಗಳನ್ನು ಸಂಬಂಧಿಸಿದ ಅಧ್ಯಯನ ವಿಭಾಗ /ಕಾಲೇಜುಗಳಲ್ಲಿ ಸಲ್ಲಿಸುವುದು.
2. Admission portalನಲ್ಲಿ Register ಆಗದೆ ಅಥವಾ ಅರ್ಜಿ ಸಲ್ಲಿಸದೆ ಇರುವ ವಿದ್ಯಾರ್ಥಿಗಳು ಮಾತ್ರ ರೂ.1,500/-ಗಳನ್ನು Online/Offline ಮೂಲಕ ವಿಶ್ವವಿದ್ಯಾನಿಲಯದ GRA ಖಾತೆಗೆ ಪಾವತಿಸಿ ಚಲನ್‌ನೊಂದಿಗೆ ಭರ್ತಿ ಮಾಡಿದ ಅರ್ಜಿ ಮತ್ತು ಅಗತ್ಯ ದಾಖಲೆಗಳನ್ನು ಸಂಬಂಧಿಸಿದ ಅಧ್ಯಯನ ವಿಭಾಗ /ಕಾಲೇಜುಗಳಲ್ಲಿ ಸಲ್ಲಿಸುವುದು.
3. ಈಗಾಗಲೇ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿರುವ ಪ್ರೋಗ್ರಾಂಗಳಿಗೆ ಅವರುಗಳ ಹೆಸರುಗಳನ್ನು ಮತ್ತೆ ಪರಿಗಣಿಸಲಾಗುವುದು. ಪುನಃ ಅರ್ಜಿ ಹಾಕುವ ಅವಶ್ಯಕತೆಯಿರುವುದಿಲ್ಲ. ಬೇರೆ ಪ್ರೋಗ್ರಾಂಗಳಿಗೆ ಪ್ರವೇಶ ಬಯಸಿದಲ್ಲಿ (ಅರ್ಹತೆಯಿದ್ದಲ್ಲಿ ಮಾತ್ರ) ರೂ. 500/-ಗಳನ್ನು Online/Offline ಮೂಲಕ ವಿಶ್ವವಿದ್ಯಾನಿಲಯದ GRA ಖಾತೆಗೆ ಪಾವತಿಸಿ ಚಲನ್‌ನೊಂದಿಗೆ ಭರ್ತಿ ಮಾಡಿದ ಅರ್ಜಿ ಮತ್ತು ಅಗತ್ಯ ದಾಖಲೆಗಳನ್ನು ಸಂಬಂಧಿಸಿದ ಅಧ್ಯಯನ ವಿಭಾಗ/ಕಾಲೇಜುಗಳಲ್ಲಿ ಸಲ್ಲಿಸುವುದು.

**ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ (verification),** ದಿನಾಂಕ 28-10-2024ರ ಒಳಗೆ ಅಧ್ಯಯನ ವಿಭಾಗ/ಕಾಲೇಜುಗಳ ಹಂತದಲ್ಲೇ ಮೆರಿಟ್ ಮತ್ತು ವರ್ಗವಾರು ಆಧಾರದ ಮೇಲೆ ನಿಯಮಾನುಸಾರ **ಎಲ್ಲಾ ಪ್ರವೇಶಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕು.**

ಮೇಲ್ಕಂಡಂತೆ ಪ್ರವೇಶಾತಿ ಪ್ರಕ್ರಿಯೆಗಳು ಪೂರ್ಣವಾದ ನಂತರ ಪ್ರವೇಶಾತಿಯು ನಿಗದಿತ ಸಂಖ್ಯಾಮಿತಿಯ ಒಳಗಿದ್ದಲ್ಲಿ ಅಥವಾ 10ಕ್ಕಿಂತ ಜಾಸ್ತಿಯಿದ್ದಲ್ಲಿ ತರಗತಿಗಳನ್ನು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕ್ಯಾಲೆಂಡರ್ ಅನುಸಾರ ಆರಂಭಿಸುವಂತೆ ತಿಳಿಸಲಾಗಿದೆ. ಮುಂದುವರೆದು, ಪ್ರವೇಶಾತಿ ಸಂಖ್ಯಾಮಿತಿ ಹತ್ತಕ್ಕಿಂತ(10) ಕಡಿಮೆ ಇದ್ದಲ್ಲಿ (ಭಾಷಾ ವಿಷಯವನ್ನು ಹೊರತುಪಡಿಸಿ) ವಿದ್ಯಾರ್ಥಿಗಳ ಮನವೊಲಿಸಿ ಇತರೆ ಸಮಾನಾಂತರ ಪ್ರೋಗ್ರಾಂಗಳಿಗೆ ಅಥವಾ ಅರ್ಹತೆಯಿರುವ ಪ್ರೋಗ್ರಾಂಗಳಿಗೆ ಪ್ರವೇಶಾತಿಗಳನ್ನು Shift ಮಾಡುವುದು. ನಂತರ, ಈ ವಿಷಯವನ್ನು ವಿಶ್ವವಿದ್ಯಾನಿಲಯದ ಗಮನಕ್ಕೆ ತಂದು ಅನುಮತಿ ಪಡೆಯುವುದು.

**ವಿಶೇಷ ಸೂಚನೆ:**

1. **ಮೇಲೆ ತಿಳಿಸಿರುವ ದಿನಾಂಕದೊಳಗೆ ಪ್ರವೇಶಾತಿ ಪ್ರಕ್ರಿಯೆಗಳನ್ನು ಮಾಡಿಕೊಂಡು, ಸದರಿ ದಿನಾಂಕದೊಳಗೆ ವಿದ್ಯಾರ್ಥಿಗಳ ವಿವರಗಳನ್ನು UUCMS Portalನಲ್ಲಿ Upload ಮಾಡುವಂತೆ ತಿಳಿಸಲಾಗಿದೆ.**
2. **ವಿಶ್ವವಿದ್ಯಾನಿಲಯ ಅಧಿಸೂಚನೆ ಸಂಖ್ಯೆ: ಎಸಿ7(ಎ)/59/2024-25, ದಿನಾಂಕ: 02-09-2024ರಲ್ಲಿ ಹೊರಡಿಸಿರುವ ಶೈಕ್ಷಣಿಕ ವೇಳಾಪಟ್ಟಿಯಂತೆ ಅನುಸರಿಸುವುದು.**

ಅರ್ಹ ಅಭ್ಯರ್ಥಿಗಳು ಪ್ರವೇಶಾತಿ ಅರ್ಜಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ **https://www.uompgadmissions.com/** ಮೂಲಕ Download ಮಾಡಿದ ಅರ್ಜಿಯನ್ನು ಭರ್ತಿ ಮಾಡಿ ಸಂಬಂಧಿಸಿದ ಅಧ್ಯಯನ ವಿಭಾಗ/ ಕಾಲೇಜುಗಳಿಗೆ ಸಲ್ಲಿಸುವುದು.

ಕುಲಸಚಿವರಿಂದ ಕರಡು ಅನುಮೋದಿಸಿದೆ.

21/10
ಉಪಕುಲಸಚಿವರು(ಶೈಕ್ಷಣಿಕ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

ಇವರಿಗೆ;

1. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ನಿರ್ದೇಶಕರುಗಳು/ಸಂಯೋಜನಾಧಿಕಾರಿಗಳು/ ಮುಖ್ಯಸ್ಥರು, ಮಾನಸಗಂಗೋತ್ರಿ, ಮೈಸೂರು.
2. ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.



Scanned with ACE Scanner